ರಿಟರ್ನಿಂಗ್ ಅಧಿಕಾರಿ, ಕರ್ನಾಟಕ ವೈದ್ಯಕೀಯ ಪರಿಷತ್,ನಂ.16/6,2 ನೇ ಮಹಡಿ,ಮಿಲ್ಲರ್ ಟ್ಯಾಂಕ್ ಬಂಡ್ ಏರಿಯಾ,ವಸಂತನಗರ, ಬೆಂಗಳೂರು-560 052

---

ಫಾರಂ-2

[ತಿದ್ದುಪಡಿ ನಿಯಮ-9(1 ರಿಂದ 6)

ಚುನಾವಣಾ ನೋಟೀಸು

Karnataka medical registration act-1961 ಮತ್ತು ನಿಯಮ 1963 ಹಾಗೂ ತಿದ್ದುಪಡಿ ನಿಯಮ 2019 ರಡಿಯ ಅವಕಾಶಗಳಂತೆ ಕರ್ನಾಟಕ ವೈದ್ಯಕೀಯ ಪರಿಷತ್ ಬೆಂಗಳೂರು ಇದರ ಕಂದಾಯ ವಿಭಾಗವಾರು ಚುನಾವಣಾ ವೇಳಾಪಟ್ಟಿಯ ಮಾರ್ಪಾಡು ಅಧಿಸೂಚನೆ

==============================

ಮೇಲ್ಕಂಡ ಪರಿಷತ್ ನ ಚುನಾವಣೆಯನ್ನು,ಚುನಾವಣಾ ದಿನಾಂಕದಿಂದ ಮುಂದಿನ 05 ವರ್ಷಗಳ (Karnataka medical registration act-1961 ಕಲಂ 05 ರಂತೆ)ಆಡಳಿತಾವಧಿಗೆ ರಾಜ್ಯದ ಕಂದಾಯ ವಿಭಾಗಗಳಾದ ಬೆಂಗಳೂರು,ಮೈಸೂರು,ಬೆಳಗಾಂ, ಗುಲ್ಬರ್ಗ(Karnataka medical registration act-1961 ರ ತಿದ್ದುಪಡಿ ಕಾಯ್ದೆ 2017 ಕಲಂ 03(2)(ಎ)ಮತ್ತು (ಬಿ) ರಂತೆ) 4 ಕಂದಾಯ ವಿಭಾಗವಾರು ಕರ್ನಾಟಕ ವೈದ್ಯಕೀಯ ಪರಿಷತ್ತಿಗೆ ಪ್ರತಿ ವಿಭಾಗದಿಂದ ಮೆಡಿಕಲ್ ಪ್ರಾಕ್ಟೀಷನರ್ಸ್ ಕ್ಷೇತ್ರದಿಂದ-02(ಇಬ್ಬರು) ಹಾಗೂ ಟೀಚರ್ಸ್ ಕ್ಷೇತ್ರದಿಂದ -01(ಒಬ್ಬರು) ಹೀಗೆ 04 ಕಂದಾಯ ವಿಭಾಗಗಳಿಂದ ಒಟ್ಟು 08(ಎಂಟು)ಜನ ಮೆಡಿಕಲ್ ಪ್ರಾಕ್ಟೀಷನರ್ಸ್ ಹಾಗೂ 04(ನಾಲ್ಕು)ಟೀಚರ್ಸ್ ರವರನ್ನು ಕೆ.ಎಂ.ಸಿ ಬೆಂಗಳೂರು ಇದರ ಆಡಳಿತ ಮಂಡಲಿ ಸದಸ್ಯರನ್ನಾಗಿ ಆಯ್ಕೆ ಮಾಡಲು ಹಕ್ಕನ್ನು ಹೊಂದಿರುವ 12 ಜನರನ್ನು ಚುನಾಯಿಸುವ ಸಲುವಾಗಿ ಸಹಕಾರ ಸಂಘಗಳ ಜಂಟಿ ನಿಬಂಧಕರು,ಬೆಂಗಳೂರು ಪ್ರಾಂತ,ಬೆಂಗಳೂರು ಆದ ನನ್ನನ್ನು ರಿಟರ್ನಿಂಗ್ ಅಧಿಕಾರಿಯಾಗಿ ನೇಮಿಸಲಾಗಿದ್ದು ಅದರಂತೆ ದಿನಾಂಕ:22/11/2019 ರಂದು ಅಧಿಸೂಚನೆ ಹೊರಡಿಸಿ ದಿನಾಂಕ:23/01/2020 ರಂದು ಮತದಾನ ಕಾರ್ಯವನ್ನು ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 5:00 ಗಂಟೆಯವರೆಗೆ ನಿಗಧಿಪಡಿಸಿ ಮತ್ತು ಮತ ಎಣಿಕೆ ಕಾರ್ಯವನ್ನು ದಿನಾಂಕ:25/01/2020 ರಂದು ನಡೆಸಲು ವೇಳಾಪಟ್ಟಿ ಹೊರಡಿಸಲಾಗಿರುತ್ತದೆ.

ತತ್ಸಂಬಂಧವಾಗಿ ಕೆ.ಎಂ.ಸಿ.ಯ ಅನೇಕ ವೈದ್ಯ ಸದಸ್ಯರು ಲಿಖಿತ ಮನವಿ ಹಾಗೂ ಮೌಖಿಕ ಮಾತಾನಾಡಿ, ಈಗಾಗಲೇ ನಿಗಧಿಯಾಗಿರುವ ಮತದಾನದ ಸಮಯವು ಬೆಳಿಗ್ಗೆ 10.00 ರಿಂದ ಸಂಜೆ 5.00 ವರೆಗಿನ ಸಮಯದಲ್ಲಿ ಸ್ವಲ್ಪ ಬದಲಾಯಿಸುವಂತೆ ಮನವಿ ಮಾಡಿ ಆಸ್ಪತ್ರೆ / ಕ್ಲಿನಿಕ್/ ನರ್ಸಿಂಗ್ ಹೋಂ.ಗಳಲ್ಲಿ ರೋಗಿಗಳು ಸೇರಿದಂತೆ ಶಸ್ತ್ರಚಿಕಿತ್ಸೆ, ವೈದ್ಯಕೀಯ ಸೇವೆಗಳನ್ನು ಹಾಗೂ ತುರ್ತು ಸೌಲಭ್ಯಗಳನ್ನು ನೀಡಬೇಕಾಗಿರುವ ಗುರುತರ ಹೊಣೆ ಹಾಗೂ ಜವಬ್ದಾರಿಯು

ನಮ್ಮ ಮೇಲೆ ಇರುವ ಕಾರಣ, ಮತದಾನದ ದಿನದ ಸಮಯ ಬೆಳಗ್ಗೆ 10.00 ರಿಂದ 5.00ವರೆಗೆ ಇರುವುದನ್ನು ಬದಲಿಸಿ ಬೆಳಗ್ಗೆ 7.00 ರಿಂದ ಸಂಜೆ 6.30 ವರೆಗೆ ವಿಸ್ತರಿಸಿ ಕೊಡಬೇಕೆಂದು ಕೋರಿರುವುದರಿಂದ ಸದರಿಯವರ ಮನವಿಗಳನ್ನು ಪರಿಗಣಿಸಿ ಮತದಾನದ ವೇಳೆಯನ್ನು ಬೆಳಗ್ಗೆ 7.00 ರಿಂದ ಸಂಜೆ 6.00 ವರೆಗೆ ಬದಲಿಸಿ ಅಧಿಸೂಚನೆ ಹೊರಡಿಸಿದೆ.

ರಿಟರ್ನಿಂಗ್ ಅಧಿಕಾರಿ,
ಕರ್ನಾಟಕ ವೈದ್ಯಕೀಯ ಪರಿಷತ್,ನಂ.16/6,2 ನೇ ಮಹಡಿ,
ಮಿಲ್ಲರ್ ಟ್ಯಾಂಕ್ ಬಂಡ್ ಏರಿಯಾ,ವಸಂತನಗರ, ಬೆಂಗಳೂರು

ದಿನಾಂಕ:21-01-2020.
ಸ್ಥಳ: ಬೆಂಗಳೂರು.

ರವರಿಗೆ,
ಕರ್ನಾಟಕ ವೈದ್ಯಕೀಯ ಪರಿಷತ್, ಬೆಂಗಳೂರು ರವರಿಗೆ ಕಳುಹಿಸುತ್ತಾ, ಮೇಲ್ಕಂಡ ಅಧಿಸೂಚನೆಯನ್ನು ಕೆ.ಎಂ.ಸಿ ವೆಬ್‌ಸೆಟ್ ಮತ್ತು john.keystone1@gamil.com ವೆಬ್‌ಸೆಟ್‌ನಲ್ಲಿ ಪ್ರಕಟಿಸುವಂತೆ ಕೋರಿದೆ.

KARNATAKA MEDICAL COUNCIL
No.
Dt.
BENGALURU